**<u>ಮೆ: ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ</u>**

CC No.809/2012

CW22/ PW8

| | |
|---|---|
| ಹೆಸರು | ಹೊಳಬಸಪ್ಪ ಮುದರಡ್ಡಿ |
| ತಂದೆ ಹೆಸರು | ದೇವರಡ್ಡಿ |
| ವಯಸ್ಸು | 67 ವರ್ಷ |
| ಉದ್ಯೋಗ | ನಿವೃತ್ತ ಡಿ.ವಾಯ್.ಎಸ್.ಪಿ |
| ವಾಸಸ್ಥಳ | ಧಾರವಾಡ |

**ದಿನಾಂಕ: 11-11-2024 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಖ್ಯ ವಿಚಾರಣೆ:- ಮಾನ್ಯ ನ್ಯಾಯಾಲಯದಿಂದ :</u>**

ನಾನು 01.02.2012 ರಿಂದ 03.10.2013 ರವರೆಗೆ ಮುಧೋಳ ಪೋಲಿಸ ಠಾಣೆಯಲ್ಲಿ ಆರಕ್ಷಕ ವೃತ್ತ ನಿರೀಕ್ಷನಾಗಿ ಕಾರ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದ ಮುಂದಿನ ತನಿಖೆಯನ್ನು ದಿನಾಂಕ 13-06-2012 ರಂದು ಚಾಸಾ-21 ರವರಿಂದ ಸ್ವೀಕರಿಸಿಕೊಂಡು ಪ್ರಕರಣದ ಕಡತವನ್ನು ಪರಿಶಿಲಿಸಿರುತ್ತೇನೆ.

ನಂತರ ಸದರಿ ದಿನಾಂಕದಂದು ಮುಂಜಾನೆ 08-00 ಗಂಟೆಯಿಂದ 9-00 ಗಂಟೆಯವರೆಗೆ ಗುನ್ನೆ ಸ್ಥಳಕ್ಕೆ ಬೇಟಿ ಕೊಟ್ಟು ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಗುನ್ನೆ ಸ್ಥಳವನ್ನು ನೋಡಿ ನಿಪಿ-1 ರಂತೆ ಗುನ್ನೆ ಸ್ಥಳದ ಪಂಚನಾಮೆ ಮಾಡಿ ಗುನ್ನೆ ಸ್ಥಳದಿಂದ ಎರಡು ಅಲ್ಯುಮಿನಿಯಂ ಬಾಗಿಲದ ಕೊಂಡಿಗಳು, ಬಾಗಿಲದ ಮೇಲಿನ ಕೊಂಡಿಯ ಕಿತ್ತು ಬಿದ್ದ ಅಲ್ಯುಮಿನಿಯಂ ಹುಕ್ಕ ಎರಡು ಸ್ಕ್ರೂ ಸಮೇತ ಇದ್ದದ್ದು ಮತ್ತು ಸ್ಟೀಲ್ ನಮೂನೆಯ ಕಬ್ಬಿಣದ ಸೈಕಲ ಮೋಟಾರ ಕಿಕ್ ಲೀವರನ್ನು ಜಪ್ತಿಪಡಿಸಿಕೊಂಡು ನಿಪಿ-4 ರಿಂದ 8 ಭಾವಚಿತ್ರಗಳನ್ನು ತೆಗೆದುಕೊಂಡಿರುತ್ತೇನೆ. ಸದರಿ ದಿನಾಂಕದಂದು ನಾನು ಚಾಸಾ-4 ರಿಂದ 11 ರವರ ಹೇಳಿಕೆಗಳನ್ನು ಪಡೆದುಕೊಂಡು ಪ್ರಕರಣದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಸದರಿ ದಿನಾಂಕದಂದು ಚಾಸಾ-1 ರವರಲ್ಲಿ ಮನೆ ಕೆಲಸ ಮಾಡುವ ಚಾಸಾ-8 ರವರ ಮೋಬೈಲದ ಕಾಲ್ ವಿವರಗಳನ್ನು ಪೂರೈಸಲು ಎಸ್.ಪಿ ಬಾಗಲಕೋಟ ರವರಿಗೆ ಪತ್ರವನ್ನು ಬರೆದಿರುತ್ತೇನೆ.

ದಿನಾಂಕ 17.06.2012 ರಂದು ಚಾಸಾ-1 ರವರ ಕಾರು ಚಾಲಕನಾದ ಆರೋಪಿ ನಂ.1 ರವರ ಮೋಬೈಲದ ಕಾಲ್ ವಿವರಗಳನ್ನು ಪೂರೈಸಲು ಎಸ್.ಪಿ ಬಾಗಲಕೋಟ ರವರಿಗೆ ಪತ್ರವನ್ನು ಬರೆದಿರುತ್ತೇನೆ.

ದಿನಾಂಕ 20.06.2012 ರಂದು ಕಾರು ಚಾಲಕನಾದ ಆರೋಪಿತ ನಂ.1 ಮೋಬೈಲದ ಕಾಲ್ ವಿವರಗಳನ್ನು ಎಸ್.ಪಿ ಬಾಗಲಕೋಟ ರವರಿಂದ ಪಡೆದುಕೊಂಡು ಪ್ರಕರಣದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಸದರಿ ಸದರಿ ಮೋಬೈಲ ಕಾಲ ವಿವರವನ್ನು ಪರಿಶೀಲಿಸಿದಾಗ ಆರೋಪಿ

ನಂ.1 ರವರ ಮೋಬೈಲ ನಂಬರವಾದ 9980250080 ನೇದ್ದಕ್ಕೆ ದಿನಾಂಕ 09.06.2012 ರಿಂದ 12.06.2012 ರವರೆಗೆ ಯಾವುದೇ ಒಳಬರುವ ಮತ್ತು ಹೊರಹೋಗುವ ಕಾಲಗಳ ವಿವರಗಳ ಲಭ್ಯವಿರಲಿಲ್ಲ. ಆದ್ದರಿಂದ ಆರೋಪಿ ನಂ.1 ರವರ ಮೇಲೆ ಸಂಶಯ ಬಂದು ಆದ್ದರಿಂದ ನಾನು ಆರೋಪಿ ನಂ.1 ರವರನ್ನು ಹಾಜರಪಡಿಸಲು ಚಾಸಾ-21 ರವರಿಗೆ ವಹಿಸಿಕೊಟ್ಟಿದ್ದೇನು.

ದಿನಾಂಕ 21.06.2012 ರಂದು ಮುಂಜಾನೆ 5-00 ಗಂಟೆ ಸುಮಾರಿಗೆ ಚಾಸಾ-21 ರವರು ಆರೋಪಿ ನಂ.1 ರವರನ್ನು ಹಿಡಿದುಕೊಂಡು ಬಂದು ನನ್ನ ಸಮಕ್ಷಮ ಹಾಜರಪಡಿಸಿ ವರದಿಯನ್ನು ನೀಡಿದರು. ನಂತರ ಸದರಿ ಆರೋಪಿ ನಂ.1 ರವರಿಗೆ ವಿಚಾರಣೆ ಮಾಡಲಾಗಿ ಆರೋಪಿ ನಂ.1 ಇವನು ತಾನು ಮತ್ತು ಇನ್ನೂಳಿದ 04 ಜನರಾದ ಅಶೋಕ ಗಂಗಪ್ಪ ಲಮಾಣಿ, ಸುಧೀರ ಬಾಬು ಮಾಲ್ಗುಡಿ, ಮಾರುತಿ ರಾವಸಾಬ ಜಾಧವ ಮತ್ತು ಮುತ್ತಪ್ಪ ಶಿವಪ್ಪ ಬಂಟನೂರ ಇವರು ಕೂಡಿಕೊಂಡು ಗುನ್ನೆ ಮಾಡಿದ ಬಗ್ಗೆ ಒಪ್ಪಿಕೊಂಡ ಮೇರೆಗೆ ನಾನು ಆರೋಪಿ ನಂ.1 ರವರ ಸ್ವಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಮುಂಜಾನೆ 6-00 ಗಂಟೆ ಸುಮಾರಿಗೆ ಆರೋಪಿ ನಂ.1 ರವರನ್ನು ನಾನು ದಸ್ತಗೀರಿ ನಿಯಮ ಪಾಲಿಸಿ ಅವನನ್ನು ಬಂಧಿಸಿ ಕಳುವಾದ ವಸ್ತುಗಳ ಬಗ್ಗೆ ವಿಚಾರಣೆ ಮಾಡಿದಾಗ ಆರೋಪಿ ನಂ.2 ರಿಂದ 5 ರವರು ಸದರಿ ಕಳುವು ಮಾಡಿದ ಬಂಗಾರದ ಆಭರಣಗಳನ್ನು ಮುತ್ತೂಟ ಪಾಯನಾನ್ಸದಲ್ಲಿ ಒತ್ತೆ ಇಟ್ಟಿರುತ್ತಾರೆ ಎಂದು ತಿಳಿಸಿದನು. ನಂತರ ಆರೋಪಿ ನಂ.2 ರಿಂದ 5 ರವರನ್ನು ನನ್ನ ಸಮಕ್ಷಮ ತಂದು ಹಾಜರ ಮಾಡಲು ಚಾಸಾ-21 ಮತ್ತು ಸಿಬ್ಬಂದಿಯವರಿಗೆ ಆದೇಶ ಮಾಡಿರುತ್ತೇನೆ. ನಂತರ ಆರೋಪಿ ನಂ.1 ಇವನು ಕಳ್ಳತನ ಮಾಡಿದ ಜಾಗೆಯನ್ನು ತೋರಿಸುತ್ತೇನೆ ಅಂತಾ ಹೇಳಿದ ಮೇರೆಗೆ ನಾನು ಚಾಸಾ-2 ಮತ್ತು 3 ರವರನ್ನು ಹಾಜರಪಡಿಸಿಕೊಂಡು ನಂತರ ಅವರಿಗೆ ಸದರಿ ವಿಷಯವನ್ನು ತಿಳಿಸಿ ಆರೋಪಿತನು ಗುನ್ನೆ ಸ್ಥಳವನ್ನು ತೋರಿಸುತ್ತಾನೆ ಅದರ ಬಗ್ಗೆ ಪಂಚನಾಮೆ ಬರೆಯುದು ಇದೆ ನೀವು ಪಂಚರಾಗಿರಿ ಅಂತಾ ಹೇಳಿದ ಮೇರೆಗೆ ಅವರು ಒಪ್ಪಿಕೊಂಡರು. ನಂತರ ನಾನು, ನಮ್ಮ ಸಿಬ್ಬಂದಿಯವರು, ಚಾಸಾ-2, 3 ಮತ್ತು ಆರೋಪಿ ನಂ.1 ಕೂಡಿಕೊಂಡು ಗುನ್ನೆ ಸ್ಥಳಕ್ಕೆ ಬೇಟಿ ಕೊಟ್ಟು ನಿಪಿ-2 ರಂತೆ ಆರೋಪಿ ನಂ. 1 ರವರು ತೋರಿಸಿದ ಗುನ್ನೆ ಸ್ಥಳ ಪಂಚನಾಮೆಯನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಮುಂಜಾನೆ 7-00 ಗಂಟೆಯಿಂದ 8-00 ಗಂಟೆಯವರೆಗೆ ಮಾಡಿರುತ್ತೇನೆ. ನಂತರ ಮರಳಿ ಮುಂಜಾನೆ 8-15 ಗಂಟೆಗೆ ಪೋಲಿಸ ಠಾಣೆಗೆ ಬಂದು ಪರಾರಿ ಇದ್ದ ಆರೋಪಿ ನಂ. 2 ರಿಂದ 5 ರವರನ್ನು ಚಾಸಾ-21 ಮತ್ತು ಅವರ ಸಿಬ್ಬಂದಿಯವರು ಹಿಡಿದುಕೊಂಡು ಬಂದು ನನ್ನ ಸಮಕ್ಷಮ ತಂದು ಹಾಜರ ಮಾಡಿರುತ್ತಾರೆ. ನಂತರ ಆರೋಪಿ ನಂ.2 ರಿಂದ 5 ರವರನ್ನು ದಸ್ತಗೀರಿ ನಿಯಮ ಪಾಲಿಸಿ ಅವರನ್ನು ವಿಚಾರಣೆ ಮಾಡಿ ಅವರ ಸ್ವಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಸದರಿ ದಿನಾಂಕಂದು ನಾನು ಚಾಸಾ-14 ರವರನ್ನು ಹಾಜರ ಮಾಡಿಕೊಂಡು ವಿಚಾರಣೆ ಮಾಡಿದಾಗ ತಾನು ಆರೋಪಿತರು ಕಳ್ಳತನ ಮಾಡಿದ ಬಂಗಾರದ ಆಭರಣಗಳನ್ನು ಬಾಗಲಕೋಟೆಯ ಮುತ್ತೂಟ ಪಾಯನಾನ್ಸ ಮತ್ತು ತಮ್ಮ ಗೆಳೆಯನಾದ ಚಾಸಾ-18 ಮಂಜೂನಾಥ ಗಂಗೂರ ಇವರ ಕಡೆಗೆ ಕೆಲವು ಆಭರಣಗಳನ್ನು ಕಡೆಗೆ ಕೊಟ್ಟು ಚೈನ ಮಾಡಲಿಕ್ಕೆ ಹಾಕಿದ್ದು ಇರುತ್ತದೆ ತಾವು ಬಂದರೆ ತೋರಿಸಿ ಹಾಜರ ಮಾಡುತ್ತೇನೆ ಅಂತಾ ಹೇಳಿದನು. ನಂತರ ನಾನು ನಮ್ಮ ಸಿಬ್ಬಂದಿಯವರು, ಪಂಚರು ಮತ್ತು ಚಾಸಾ-14 ಕೂಡಿಕೊಂಡು ಸರ್ಕಾರಿ ಜೀಪದಲ್ಲಿ ಕೂಳಿತುಕೊಂಡು ಚಾಸಾ-14 ರವರು ಬಾಗಲಕೋಟೆಯ ನವನಗರದಲ್ಲಿರುವ

ಗಂಗೂರ ರವರ ಪತ್ತಾರ ಅಂಗಡಿಗೆ ಜೀಪ ಹೊಡೆಯಲು ಹೇಳಿದ ಮೇರೆಗೆ ನಾವೇಲ್ಲರೂ ಕೂಡಿಕೊಂಡು ಚಾಸಾ-14 ರವರು ಹೇಳಿದ ಹಾಗೆ ಜೀಪನ್ನು ಚಲಾಯಿಸಿಕೊಂಡು ಸದರಿ ಪತ್ತಾರ ಅಂಗಡಿಗೆ ಹೊದೇವು. ಅಲ್ಲಿ ನಾವುಗಳೆಲ್ಲರೂ ಜೀಪದಲ್ಲಿಂದ ಇಳಿದು ಚಾಸಾ-14 ರವರು ನಮ್ಮೆಲ್ಲರನ್ನು ಕರೆದುಕೊಂಡು ಹೋಗಿ ಅಲ್ಲಿ ಇರುವ ವ್ಯಕ್ತಿಯನ್ನು ತೋರಿಸಿ ಅವನ ಹೆಸರು ಮಂಜೂನಾಥ ಗಂಗೂರ ಇರುತ್ತದೆ ಮತ್ತು ನಾವು ಇವನ ಹತ್ತಿರ ಬಂಗಾರದ ಆಭರಗಳನ್ನು ಚೈನ ಮಾಡಲೀಕ್ಕೆ ಕೊಟ್ಟಿರುತ್ತೇವೆ ಅಂತಾ ಹೇಳಿದನು. ನಂತರ ಸದರಿ ಮಂಜೂನಾಥ ಇವನಿಗೆ ನಾನು ಪಂಚರ ಸಮಕ್ಷಮ ವಿಚಾರಣೆ ಮಾಡಿದಾಗ ಅವನು ಆರೋಪಿತರು ತನಗೆ ಎರಡುವರೆ ತೊಲೆ 03 ಎಳೆಯ ಬಂಗಾರದ ಸರ, ಒಂದುವರೆ ತೋಲೆಯ ಬಂಗಾರದ ಬಳೆ, 03 ತೋಲೆಯ ಬಂಗಾರದ ಎರಡು ಬಿಲ್ವರಗಳು ಮತ್ತು 05 ಗ್ರಾಂ ದ ಬಂಗಾರದ ಚೈನನ್ನು, ಒಟ್ಟು ಎಳುವರೆ ತೋಲೆ ಬಂಗಾರದ ಆಭರಣಗಳನ್ನು ಕೊಟ್ಟಿರುತ್ತಾರೆ ಎಂದು ಹೇಳಿದನು. ನಂತರ ಮಂಜೂನಾಥ ಇವನು ಆರೋಪಿತನು ಕೊಟ್ಟಿರುವ ಬಂಗಾರದ ಆಭರಣಗಳನ್ನು ಪಂಚರ ಸಮಕ್ಷಮ ಹಾಜರ ಮಾಡಿದ ಮೇರೆಗೆ ನಾನು ಪಂಚರ ಸಮಕ್ಷಮ ನಿಪಿ-3 ರಂತೆ ಸದರಿ ಅಂಗಡಿಯಲ್ಲಿ ಮದ್ಯಾಹ್ನ 12-00 ಗಂಟೆಯಿಂದ 1-00 ಗಂಟೆಯವರೆಗೆ ಪಂಚನಾಮೆಯನ್ನು ಮಾಡಿ ಸದರಿ ಆಭರಣಗಳನ್ನು ಜಪ್ತಿಪಡಿಸಿಕೊಂಡೆನು. ನಂತರ ಸದರಿ ಅಂಗಡಿಯಿಂದ ಚಾಸಾ-14 ರವರು ನಮ್ಮನ್ನು ಜಿಪದಲ್ಲಿಂದ ಬಾಗಲಕೊಟೆಯ ರೆಲ್ವೆ ನಿಲ್ದಾಣದ ಹತ್ತಿರ ಇರುವ ಮುತ್ತೂಟ ಪಾಯನಾನ್ಸಗೆ ಕರೆದುಕೊಂಡು ಹೇಳಿದ ಮೇರೆಗೆ ನಾವೆಲ್ಲರೂ ಕೂಡಿಕೊಂಡು ಸದರಿ ಜಿಪದಲ್ಲಿ ದೆಸಾಯಿ ಗ್ಯಾರೇಜ ಹತ್ತಿರ ಬಂದಾಗ ಜೀಪನ್ನು ನಿಲ್ಲಿಸಲು ಹೇಳಿದ ಮೇರಗೆ ಜೀಪನ್ನು ನೀಲ್ಲಿಸಿದೇವು. ನಂತರ ಚಾಸಾ-14 ರವರು ನಮ್ಮನ್ನು ಮತ್ತು ಪಂಚರನ್ನು ಮುತ್ತೂಟ ಪಾಯನಾನ್ಸಗೆ ಕರೆದುಕೊಂಡು ಹೋದನು. ನಂತರ ಸದರಿ ಪಾಯನಾನ್ಸದ ಮ್ಯಾನೇಜರವರಾದ ಚಾಸಾ-19 ರವರನ್ನು ವಿಚಾರಣೆ ಮಾಡಿದಾಗ ಚಾಸಾ-14 ರವರು ಬಂಗಾರದ ಆಭರಣಗಳನ್ನು ಒತ್ತೆ ಇಟ್ಟು ತಮ್ಮ ಪಾಯನಾನ್ಸದಿಂದ 1,76,000/-ಗಳನ್ನು ಸಾಲಪಡೆದುಕೊಂಡಿರುತ್ತಾರೆ ಎಂದು ಹೇಳಿದರು. ನಂತರ ಚಾಸಾ-19 ರವರು ಆರೋಪಿತರು ಅಡವಿಟ್ಟ 05 ತೋಲೆಯ 03 ಎಳೆಯ ಬಂಗಾರದ ಚಪ್ಪಲಹಾರ, ನಾಲ್ಕುವರೆ ತೋಲೆಯ ಬಂಗಾರದ ಲಾಂಗ್ ಚೈನ ಮತ್ತು 7.5 ಗ್ರಾಂದ ಬಂಗಾರ ಕಿವಿ ಒಲೆಗಳನ್ನು, ಒಟ್ಟು 10.25 ತೋಲೆಯ ಮೇಲ್ಕಂಡ ಆಭರಣಗಳನ್ನು ಹಾಜರ ಮಾಡಿದ್ದು ಅವುಗಳನ್ನು ನಾನು ಪಂಚರ ಸಮಕ್ಷಮ ತೂಕ ಮಾಡಿ ಪಂಚನಾಮೆಯನ್ನು ಮದ್ಯಾಹ್ನ 2-30 ರಿಂದ 3-15 ಗಂಟೆಯವರೆಗೆ ಸದರಿ ಪಾಯನಾನ್ಸದಲ್ಲಿ ನಿಪಿ-3 ರಂತೆ ಮಾಡಿರುತ್ತೇನೆ. ನಂತರ ನಾನು ಮುಧೋಳ ಮರಳಿ ಪೋಲಿಸ ಠಾಣೆಗೆ ಬಂದಿರುತ್ತೇನೆ. ನಂತರ ಸದರಿ ದಿನಾಂಕದಂದು ಚಾಸಾ-1 ರವರ, ಚಾಸಾ- 4 ರಿಂದ 12 ರವರ ಮರು ಹೇಳಿಕೆಗಳನ್ನು ಪಡೆದುಕೊಂಡು ಪ್ರಕರಣದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಸದರಿ ದಿನಾಂಕದಂದು ಚಾಸಾ-14 ರಿಂದ 19 ರವರ

ಹೇಳಿಕೆಗಳನ್ನು ಪಡೆದುಕೊಂಡು ಪ್ರಕರಣದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ 05 ಜನ ಆರೋಪಿತರನ್ನು ನಮ್ಮ ಸಿಬ್ಬಂದಿಯವರ ಮುಖಾಂತರ ನ್ಯಾಯಾಲಯಕ್ಕೆ ಹಾಜರ ಮಾಡಿರುತ್ತೇನೆ ಮತ್ತು ಜಪ್ತಾದ ಮು.ಮಾ ಕ್ಕೆ ಸಂಬಂದಿಸಿದಂತೆ ಪಿ.ಎಪ ನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ನಂತರ ದಿನಾಂಕ 28.06.2012 ರಂದು ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷಾದಾರಗಳು ಕಂಡುಬಂದಿದ್ದರಿಂದ ಅವರ ವಿರುದ್ದ ನ್ಯಾಯಾಲಯಕ್ಕೆ ದೋ.ಪವನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿಪಿ-1 ರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಬಿ) ಎಂದು, ಸಾಕ್ಷಿಯು ತಾನು ಗುನ್ನೆ ಸ್ಥಳದಲ್ಲಿ ತಯಾರಿಸಿದ ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಎಂದು ಮತ್ತು ಅದರ ಮೇಲೆ ಇರುವ ಸಾಕ್ಷಿ ಸಹಿಯನ್ನು ನಿಪಿ-18(ಎ)ಎಂದು, ಸಾಕ್ಷಿಯು ನಿಪಿ-2 ರ ಮೇಲೆ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಬಿ) ಎಂದು, ಸಾಕ್ಷಿಯು ನಿಪಿ-3 ರ ಮೇಲೆ ಇರುವ ತನ್ನ ಎರಡು ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗ ನಿಪಿ-3(ಬ) ಮತ್ತು ನಿಪಿ-3(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಚಾಸಾ-20 ಮತ್ತು 21 ರವರು ಸಲ್ಲಿಸಿದ ಮೂರು ವರದಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-19 ರಿಂದ 21 ಎಂದು ಗುರುತಿಸಿ, ಅವುಗಳ ಮೇಲೆ ಇರುವ ಸಾಕ್ಷಿಯ ಸಹಿಗಳನ್ನು ನಿಪಿ-19(ಎ), ನಿಪಿ-20(ಎ) ಮತ್ತು ನಿಪಿ-21(ಎ) ಎಂದು ಗುರುತಿಸಲಾಯಿತು.

ಮಾನ್ಯ ಸ.ಸ.ಅ ರವರು ಆರೋಪಿ ನಂ.1 ರಿಂದ 5 ರವರು ನೀಡಿದ ಸ್ವಖುಷಿ ಹೇಳಿಕೆಯನ್ನು ನಿಶಾನೆ ಮಾಡಲು ಕೇಳಿಕೊಂಡಿದ್ದು ಆದರೆ ಸದರಿ ಹೇಳಿಕೆಯಲ್ಲಿ ಕಲಂ 27 ಸಾಕ್ಷ ಅಧೀನಿಯಮದ ಯಾವುದೇ ಅಂಶಗಳು ಇಲ್ಲದೆ ಇರುವುದು ಕಂಡುಬಂದಿದ್ದರಿಂದ ಅವುಗಳನ್ನು ನಿಶಾನೆಗೊಳಿಸಲಾಗಲಿಲ್ಲ.

ನಾನು ಬಂದಿಸಿ ನ್ಯಾಯಾಲಯಕ್ಕೆ ಹಾಜರ ಮಾಡಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ ಅವರ ಪೈಕಿ ಈಗ ಇಬ್ಬರು ಈಗ ನ್ಯಾಯಾಲಯದ ಮುಂದೆ ಇರುತ್ತಾರೆ.

(ಆರೋಪಿ ನಂ.5 ರವರನ್ನು ಗುರುತಿಸುವ ಬಗ್ಗೆ ಅವರ ಪರ ವಕೀಲರು ಯಾವುದೇ ತಕರಾರು ಇರವುದಿಲ್ಲ ಎಂದು ಕಲಂ 317 ಸಿ ಆರ್ ಪಿ ಸಿ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ)

ನಾನು ಜಪ್ತಿ ಮಾಡಿದ ಬಂಗಾರದ ಆಭರಣಗಳನ್ನು ನೋಡಿದರೆ ಗುರುತಿಸುತ್ತೇನೆ.

ಈಗ ನ್ಯಾಯಾಲಯದ ಮುಂದೆ ಇರುವ ಮು.ಮಾ-1 ರಿಂದ 3 ವಸ್ತುಗಳನ್ನು ಗುನ್ನೆ ಸ್ಥಳ ಪಂಚನಾಮೆ ಕಾಲಕ್ಕೆ ನಾನು ಜಪ್ತಿಪಡಿಸಿಕೊಂಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ 1 ಮತ್ತು 4 ರವರ ಪರ ಶ್ರೀ.ಎಸ್.ಬಿ.ಜೆ ವಕೀಲರಿಂದಃ**

ಈ ಪ್ರಕರಣದ ಮುಂದಿನ ತನಿಖೆಯನ್ನು ದಿನಾಂಕ 13-06-2012 ರಂದು ಚಾಸಾ-21 ರವರಿಂದ ಸ್ವೀಕರಿಸಿಕೊಂಡು ಪ್ರಕರಣದ ಕಡತವನ್ನು ಪರಿಶಿಲಿಸಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಂತರ ಸದರಿ ದಿನಾಂಕದಂದು ಮುಂಜಾನೆ 08-00 ಗಂಟೆಯಿಂದ 9-00 ಗಂಟೆಯವರೆಗೆ ಗುನ್ನೆ ಸ್ಥಳಕ್ಕೆ ಬೇಟಿ ಕೊಟ್ಟು ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಗುನ್ನೆ ಸ್ಥಳವನ್ನು ನೋಡಿ ನಿಪಿ-1 ರಂತೆ ಗುನ್ನೆ ಸ್ಥಳದ ಪಂಚನಾಮೆ ಮಾಡಿ ಗುನ್ನೆ ಸ್ಥಳದಿಂದ ಎರಡು ಅಲ್ಯುಮಿನಿಯಂ ಬಾಗಿಲದ ಕೊಂಡಿಗಳು, ಬಾಗಿಲದ ಮೇಲಿನ ಕೊಂಡಿಯ ಕಿತ್ತು ಬಿದ್ದ ಅಲ್ಯುಮಿನಿಯಂ ಹುಕ್ಕ ಎರಡು ಸ್ಕ್ರೂ ಸಮೇತ ಇದ್ದದ್ದು ಮತ್ತು ಸ್ಟೀಲ್ ನಮೂನೆಯ ಕಬ್ಬಿಣದ ಸೈಕಲ ಮೋಟಾರ ಕಿಕ್ ಲೀವರನ್ನು ಜಪ್ತಿಪಡಿಸಿಕೊಂಡು ನಿಪಿ-4 ರಿಂದ 8 ಭಾವಚಿತ್ರಗಳನ್ನು ತೆಗೆದುಕೊಂಡಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನಾಂಕದಂದು ನಾನು ಚಾಸಾ-4 ರಿಂದ 11 ರವರ ಹೇಳಿಕೆಗಳನ್ನು ಪಡೆದುಕೊಂಡು ಪ್ರಕರಣದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಮತ್ತು ನಂತರ ಸದರಿ ದಿನಾಂಕದಂದು ಚಾಸಾ-1 ರವರಲ್ಲಿ ಮನೆ ಕೆಲಸ ಮಾಡುವ ಚಾಸಾ-8 ರವರ ಮೋಬೈಲದ ಕಾಲ್ ವಿವರಗಳನ್ನು ಪೂರೈಸಲು ಎಸ್.ಪಿ ಬಾಗಲಕೋಟ ರವರಿಗೆ ಪತ್ರವನ್ನು ಬರೆದಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 17.06.2012 ರಂದು ಚಾಸಾ-1 ರವರ ಕಾರು ಚಾಲಕನಾದ ಆರೋಪಿ ನಂ.1 ರವರ ಮೋಬೈಲದ ಕಾಲ್ ವಿವರಗಳನ್ನು ಪೂರೈಸಲು ಎಸ್.ಪಿ ಬಾಗಲಕೋಟ ರವರಿಗೆ ಪತ್ರವನ್ನು ಬರೆದಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 20.06.2012 ರಂದು ಕಾರು ಚಾಲಕನಾದ ಆರೋಪಿತ ನಂ.1 ಮೋಬೈಲದ ಕಾಲ್ ವಿವರಗಳನ್ನು ಎಸ್.ಪಿ ಬಾಗಲಕೋಟ ರವರಿಂದ ಪಡೆದುಕೊಂಡು ಪ್ರಕರಣದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಮತ್ತು ನಂತರ ಸದರಿ ಸದರಿ ಮೋಬೈಲ ಕಾಲ ವಿವರವನ್ನು ಪರಿಶೀಲಿಸಿದಾಗ ಆರೋಪಿ ನಂ.1 ರವರ ಮೋಬೈಲ ನಂಬರಾದ 9980250080 ನೇದ್ದಕ್ಕೆ ದಿನಾಂಕ 09.06.2012 ರಿಂದ 12.06.2012 ರವರೆಗೆ ಯಾವುದೇ ಒಳಬರುವ ಮತ್ತು ಹೊರಹೋಗುವ ಕಾಲಗಳ ವಿವರಗಳ ಲಭ್ಯವಿರಲಿಲ್ಲ ಎಂದು ಹಾಗೂ ಆದ್ದರಿಂದ ಆರೋಪಿ ನಂ.1 ರವರ ಮೇಲೆ ಸಂಶಯ ಬಂದು ಆದ್ದರಿಂದ ನಾನು ಆರೋಪಿ ನಂ.1 ರವರನ್ನು ಹಾಜರಪಡಿಸಲು ಚಾಸಾ-21 ರವರಿಗೆ ವಹಿಸಿಕೊಟ್ಟಿದ್ದೇನು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 21.06.2012 ರಂದು ಮುಂಜಾನೆ 5-00 ಗಂಟೆ ಸುಮಾರಿಗೆ ಚಾಸಾ-21 ರವರು ಆರೋಪಿ ನಂ.1 ರವರನ್ನು ಹಿಡಿದುಕೊಂಡು ಬಂದು ನನ್ನ ಸಮಕ್ಷಮ ಹಾಜರಪಡಿಸಿ ವರದಿಯನ್ನು ನೀಡಿದರು ಎಂದು ಮತ್ತು ಸದರಿ ಆರೋಪಿ ನಂ.1 ರವರಿಗೆ ವಿಚಾರಣೆ ಮಾಡಲಾಗಿ ಆರೋಪಿ ನಂ.1 ಇವನು ತಾನು ಮತ್ತು ಇನ್ನೂಳಿದ 04 ಜನರಾದ ಅಶೋಕ ಗಂಗಪ್ಪ ಲಮಾಣಿ, ಸುಧೀರ ಬಾಬು ಮಾಲ್ಗುಡಿ, ಮಾರುತಿ ರಾವಸಾಬ ಜಾಧವ ಮತ್ತು ಮುತ್ತಪ್ಪ ಶಿವಪ್ಪ ಬಂಟನೂರ ಇವರು ಕೂಡಿಕೊಂಡು ಗುನ್ನೆ ಮಾಡಿದ ಬಗ್ಗೆ ಒಪ್ಪಿಕೊಂಡ ಮೇರೆಗೆ ನಾನು ಆರೋಪಿ ನಂ.1 ರವರ ಸ್ವಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಮುಂಜಾನೆ 6-00 ಗಂಟೆ ಸುಮಾರಿಗೆ ಆರೋಪಿ ನಂ.1 ರವರನ್ನು ನಾನು ದಸ್ತಗೀರಿ ನಿಯಮ ಪಾಲಿಸಿ ಅವನನ್ನು ಬಂಧಿಸಿ ಕಳುವಾದ ವಸ್ತುಗಳ ಬಗ್ಗೆ ವಿಚಾರಣೆ ಮಾಡಿದಾಗ ಆರೋಪಿ ನಂ.2 ರಿಂದ 5 ರವರು

ಸದರಿ ಕಳುವು ಮಾಡಿದ ಬಂಗಾರದ ಆಭರಣಗಳನ್ನು ಮುತ್ತೂಟ ಪಾಯನಾನ್ಸದಲ್ಲಿ ಒತ್ತೆ ಇಟ್ಟಿರುತ್ತಾರೆ ಎಂದು ತಿಳಿಸಿದನು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಆರೋಪಿ ನಂ.2 ರಿಂದ 5 ರವರನ್ನು ನನ್ನ ಸಮಕ್ಷಮ ತಂದು ಹಾಜರ ಮಾಡಲು ಚಾಸಾ-21 ಮತ್ತು ಸಿಬ್ಬಂದಿಯವರಿಗೆ ಆದೇಶ ಮಾಡಿರುತ್ತೇನೆ ಎಂದು ಹಾಗೂ ಆರೋಪಿ ನಂ.1 ಇವನು ಕಳ್ಳತನ ಮಾಡಿದ ಜಾಗೆಯನ್ನು ತೋರಿಸುತ್ತೇನೆ ಅಂತಾ ಹೇಳಿದ ಮೇರೆಗೆ ನಾನು ಚಾಸಾ-2 ಮತ್ತು 3 ರವರನ್ನು ಹಾಜರಪಡಿಸಿಕೊಂಡು ನಂತರ ಅವರಿಗೆ ಸದರಿ ವಿಷಯವನ್ನು ತಿಳಿಸಿ ಆರೋಪಿತನು ಗುನ್ನೆ ಸ್ಥಳವನ್ನು ತೋರಿಸುತ್ತಾನೆ ಅದರ ಬಗ್ಗೆ ಪಂಚನಾಮೆ ಬರೆಯುದು ಇದೆ ನೀವು ಪಂಚರಾಗಿರಿ ಅಂತಾ ಹೇಳಿದ ಮೇರೆಗೆ ಅವರು ಒಪ್ಪಿಕೊಂಡರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ನಾನು, ನಮ್ಮ ಸಿಬ್ಬಂದಿಯವರು, ಚಾಸಾ-2, 3 ಮತ್ತು ಆರೋಪಿ ನಂ.1 ಕೂಡಿಕೊಂಡು ಗುನ್ನೆ ಸ್ಥಳಕ್ಕೆ ಬೇಟಿ ಕೊಟ್ಟು ನಿಪಿ-2 ರಂತೆ ಆರೋಪಿ ನಂ. 1 ರವರು ತೋರಿಸಿದ ಗುನ್ನೆ ಸ್ಥಳ ಪಂಚನಾಮೆಯನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಮುಂಜಾನೆ 7-00 ಗಂಟೆಯಿಂದ 8-00 ಗಂಟೆಯವರೆಗೆ ಮಾಡಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಮರಳಿ ಮುಂಜಾನೆ 8-15 ಗಂಟೆಗೆ ಪೋಲಿಸ ಠಾಣೆಗೆ ಬಂದು ಪರಾರಿ ಇದ್ದ ಆರೋಪಿ ನಂ. 2 ರಿಂದ 5 ರವರನ್ನು ಚಾಸಾ-21 ಮತ್ತು ಅವರ ಸಿಬ್ಬಂದಿಯವರು ಹಿಡಿದುಕೊಂಡು ಬಂದು ನನ್ನ ಸಮಕ್ಷಮ ತಂದು ಹಾಜರ ಮಾಡಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಆರೋಪಿ ನಂ.2 ರಿಂದ 5 ರವರನ್ನು ದಸ್ತಗೀರಿ ನಿಯಮ ಪಾಲಿಸಿ ಅವರನ್ನು ವಿಚಾರಣೆ ಮಾಡಿ ಅವರ ಸ್ವಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಸದರಿ ದಿನಾಂಕಂದು ನಾನು ಚಾಸಾ-14 ರವರನ್ನು ಹಾಜರ ಮಾಡಿಕೊಂಡು ವಿಚಾರಣೆ ಮಾಡಿದಾಗ ತಾನು ಆರೋಪಿತರು ಕಳ್ಳತನ ಮಾಡಿದ ಬಂಗಾರದ ಆಭರಣಗಳನ್ನು ಬಾಗಲಕೋಟೆಯ ಮುತ್ತೂಟ ಪಾಯನಾನ್ಸ ಮತ್ತು ತಮ್ಮ ಗೆಳೆಯನಾದ ಚಾಸಾ-18 ಮಂಜೂನಾಥ ಗಂಗೂರ ಇವರ ಕಡೆಗೆ ಕೆಲವು ಆಭರಣಗಳನ್ನು ಕಡೆಗೆ ಕೊಟ್ಟು ಚೈನ ಮಾಡಲಿಕ್ಕೆ ಹಾಕಿದ್ದು ಇರುತ್ತದೆ ತಾವು ಬಂದರೆ ತೋರಿಸಿ ಹಾಜರ ಮಾಡುತ್ತೇನೆ ಅಂತಾ ಹೇಳಿದನು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ನಾನು ನಮ್ಮ ಸಿಬ್ಬಂದಿಯವರು, ಪಂಚರು ಮತ್ತು ಚಾಸಾ-14 ಕೂಡಿಕೊಂಡು ಸರ್ಕಾರಿ ಜೀಪದಲ್ಲಿ ಕೂಳಿತುಕೊಂಡು ಚಾಸಾ-14 ರವರು ಬಾಗಲಕೋಟೆಯ ನವನಗರದಲ್ಲಿರುವ ಗಂಗೂರ ರವರ ಪತ್ತಾರ ಅಂಗಡಿಗೆ ಜೀಪ ಹೊಡೆಯಲು ಹೇಳಿದ ಮೇರೆಗೆ ನಾವೇಲ್ಲರೂ ಕೂಡಿಕೊಂಡು ಚಾಸಾ-14 ರವರು ಹೇಳಿದ ಹಾಗೆ ಜೀಪನ್ನು ಚಲಾಯಿಸಿಕೊಂಡು ಸದರಿ ಪತ್ತಾರ ಅಂಗಡಿಗೆ ಹೊದೇವು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ನಾವುಗಳೆಲ್ಲರೂ ಜೀಪದಲ್ಲಿಂದ ಇಳಿದು ಚಾಸಾ-14 ರವರು ನಮ್ಮೆಲ್ಲರನ್ನು ಕರೆದುಕೊಂಡು ಹೋಗಿ ಅಲ್ಲಿ ಇರುವ ವ್ಯಕ್ತಿಯನ್ನು ತೋರಿಸಿ ಅವನ ಹೆಸರು ಮಂಜೂನಾಥ ಗಂಗೂರ ಇರುತ್ತದೆ ಮತ್ತು ನಾವು ಇವನ ಹತ್ತಿರ ಬಂಗಾರದ ಆಭರಗಳನ್ನು ಚೈನ ಮಾಡಲೀಕ್ಕೆ ಕೊಟ್ಟಿರುತ್ತೇವೆ ಅಂತಾ ಹೇಳಿದನು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಸದರಿ ಮಂಜೂನಾಥ ಇವನಿಗೆ ನಾನು ಪಂಚರ ಸಮಕ್ಷಮ ವಿಚಾರಣೆ ಮಾಡಿದಾಗ ಅವನು ಆರೋಪಿತರು ತನಗೆ ಎರಡುವರೆ ತೊಲೆ 03 ಎಳೆಯ ಬಂಗಾರದ ಸರ, ಒಂದುವರೆ ತೋಲೆಯ ಬಂಗಾರದ ಬಳೆ, 03 ತೋಲೆಯ ಬಂಗಾರದ ಎರಡು ಬಿಲ್ವರಗಳು ಮತ್ತು 05 ಗ್ರಾಂ ದ ಬಂಗಾರದ ಚೈನನ್ನು, ಒಟ್ಟು ಎಳುವರೆ ತೋಲೆ ಬಂಗಾರದ ಆಭರಣಗಳನ್ನು ಕೊಟ್ಟಿರುತ್ತಾರೆ

ಎಂದು ಹೇಳಿದನು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಮಂಜೂನಾಥ ಇವನು ಆರೋಪಿತನು ಕೊಟ್ಟಿರುವ ಬಂಗಾರದ ಆಭರಣಗಳನ್ನು ಪಂಚರ ಸಮಕ್ಷಮ ಹಾಜರ ಮಾಡಿದ ಮೇರೆಗೆ ನಾನು ಪಂಚರ ಸಮಕ್ಷಮ ನಿಪಿ-3 ರಂತೆ ಸದರಿ ಅಂಗಡಿಯಲ್ಲಿ ಮದ್ಯಾಹ್ನ 12-00 ಗಂಟೆಯಿಂದ 1-00 ಗಂಟೆಯವರೆಗೆ ಪಂಚನಾಮೆಯನ್ನು ಮಾಡಿ ಸದರಿ ಆಭರಣಗಳನ್ನು ಜಪ್ತಿಪಡಿಸಿಕೊಂಡೆನು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಸದರಿ ಅಂಗಡಿಯಿಂದ ಚಾಸಾ-14 ರವರು ನಮ್ಮನ್ನು ಜಿಪದಲ್ಲಿಂದ ಬಾಗಲಕೊಟೆಯ ರೆಲ್ವೆ ನಿಲ್ದಾಣದ ಹತ್ತಿರ ಇರುವ ಮುತ್ತೂಟ ಪಾಯನಾನ್ಸಗೆ ಕರೆದುಕೊಂಡು ಹೇಳಿದ ಮೇರೆಗೆ ನಾವೆಲ್ಲರೂ ಕೂಡಿಕೊಂಡು ಸದರಿ ಜಿಪದಲ್ಲಿ ದೆಸಾಯಿ ಗ್ಯಾರೇಜ ಹತ್ತಿರ ಬಂದಾಗ ಜೀಪನ್ನು ನಿಲ್ಲಿಸಲು ಹೇಳಿದ ಮೇರಗೆ ಜೀಪನ್ನು ನೀಲ್ಲಿಸಿದೇವು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಂತರ ಚಾಸಾ-14 ರವರು ನಮ್ಮನ್ನು ಮತ್ತು ಪಂಚರನ್ನು ಮುತ್ತೂಟ ಪಾಯನಾನ್ಸಗೆ ಕರೆದುಕೊಂಡು ಹೋದನು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಸದರಿ ಪಾಯನಾನ್ಸದ ಮ್ಯಾನೇಜರವರಾದ ಚಾಸಾ-19 ರವರನ್ನು ವಿಚಾರಣೆ ಮಾಡಿದಾಗ ಚಾಸಾ-14 ರವರು ಬಂಗಾರದ ಆಭರಣಗಳನ್ನು ಒತ್ತೆ ಇಟ್ಟು ತಮ್ಮ ಪಾಯನಾನ್ಸದಿಂದ 1,76,000/-ಗಳನ್ನು ಸಾಲಪಡೆದುಕೊಂಡಿರುತ್ತಾರೆ ಎಂದು ಹೇಳಿದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಚಾಸಾ-19 ರವರು ಆರೋಪಿತರು ಅಡವಿಟ್ಟ 05 ತೋಲೆಯ 03 ಎಳೆಯ ಬಂಗಾರದ ಚಪ್ಪಲಹಾರ, ನಾಲ್ಕುವರೆ ತೋಲೆಯ ಬಂಗಾರದ ಲಾಂಗ್ ಚೈನ ಮತ್ತು 7.5 ಗ್ರಾಂದ ಬಂಗಾರ ಕಿವಿ ಒಲೆಗಳನ್ನು, ಒಟ್ಟು 10.25 ತೋಲೆಯ ಮೇಲ್ಕಂಡ ಆಭರಣಗಳನ್ನು ಹಾಜರ ಮಾಡಿದ್ದು ಅವುಗಳನ್ನು ನಾನು ಪಂಚರ ಸಮಕ್ಷಮ ತೂಕ ಮಾಡಿ ಪಂಚನಾಮೆಯನ್ನು ಮದ್ಯಾಹ್ನ 2-30 ರಿಂದ 3-15 ಗಂಟೆಯವರೆಗೆ ಸದರಿ ಪಾಯನಾನ್ಸದಲ್ಲಿ ನಿಪಿ-3 ರಂತೆ ಮಾಡಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಂತರ ನಾನು ಮುಧೋಳ ಮರಳಿ ಪೋಲಿಸ ಠಾಣೆಗೆ ಬಂದಿರುತ್ತೇನೆ ಎಂದು ಮತ್ತು ಸದರಿ ದಿನಾಂಕದಂದು ಚಾಸಾ-1 ರವರ, ಚಾಸಾ- 4 ರಿಂದ 12 ರವರ ಮರು ಹೇಳಿಕೆಗಳನ್ನು ಪಡೆದುಕೊಂಡು ಪ್ರಕರಣದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಹಾಗೂ ನಂತರ ಸದರಿ ದಿನಾಂಕದಂದು ಚಾಸಾ-14 ರಿಂದ 19 ರವರ ಹೇಳಿಕೆಗಳನ್ನು ಪಡೆದುಕೊಂಡು ಪ್ರಕರಣದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಂತರ 05 ಜನ ಆರೋಪಿತರನ್ನು ನಮ್ಮ ಸಿಬ್ಬಂದಿಯವರ ಮುಖಾಂತರ ನ್ಯಾಯಾಲಯಕ್ಕೆ ಹಾಜರ ಮಾಡಿರುತ್ತೇನೆ ಮತ್ತು ಜಪ್ತಾದ ಮು.ಮಾ ಕ್ಕೆ ಸಂಬಂದಿಸಿದಂತೆ ಪಿ.ಎಪ ನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಂತರ ದಿನಾಂಕ 28.06.2012 ರಂದು ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷಾದಾರಗಳು ಕಂಡುಬಂದಿದ್ದರಿಂದ ಅವರ ವಿರುದ್ದ ನ್ಯಾಯಾಲಯಕ್ಕೆ ದೋ.ಪವನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ನಂ.3 ಮತ್ತು 5 ರವರ ಪರ ಶ್ರೀ ಟಿ.ಆರ್.ಎಚ್ ಮತ್ತು ಶ್ರೀ ಎಚ್ ಕೆ ಬಿ ವಕೀಲರು ಈ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧಿಪಿಶರು ಹಾಗೂ
ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ